# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್ ರಸ್ತೆ, ತುಮಕೂರು 572103

ದೂರವಾಣಿ; 0816 225596, 0816 2255597, 0816 2255597 ಫ್ಯಾಕ್ಸ್ ; 0816 2270719


ಸಂಖ್ಯೆ:ತುವಿ:ಶೈವಿ:UG-ADM:2021-22:2711 ದಿನಾಂಕ:18.11.2021

## ಸುತ್ತೋಲೆ

ವಿಷಯ : ಎಲ್ಲಾ ಸ್ನಾತಕ ವಿದ್ಯಾರ್ಥಿಗಳಿಗೆ ಷರತ್ತಿಗೊಳಪಟ್ಟು ಪ್ರವೇಶಾತಿ ಮಾಡಿಕೊಳ್ಳುವ ಕುರಿತು

ಉಲ್ಲೇಖ : ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 18.11.2021

(ಕಂಡಿಕೆ: 86 ಪುಟ ಸಂಖ್ಯೆ: 19)

*****

ತಾಂತ್ರಿಕ ವಿದ್ಯಾಭ್ಯಾಸ ಹಾಗೂ ಇನ್ನಿತರೆ ವೃತ್ತಿಪರ ಕೋರ್ಸುಗಳಿಗೆ ಪ್ರವೇಶ ನಿರೀಕ್ಷಿಸಿ, ಪ್ರವೇಶ ಪಡೆಯದೇ ಇರುವ ವಿದ್ಯಾರ್ಥಿಗಳು ಇದೀಗ ಸ್ನಾತಕ ಪದವಿ ಕಾರ್ಯಕ್ರಮಗಳಿಗೆ ಪ್ರವೇಶ ಬಯಸುತ್ತಿದ್ದು, ದಿನಾಂಕ:23.11.2021ರವರೆಗೆ ಈ ಕೆಳಗಿನ ನಿಬಂಧನೆಗಳಿಗೊಳಪಟ್ಟು ಪ್ರವೇಶ ನೀಡಲು ತಿಳಿಸಿದೆ.

1) ಪ್ರತೀ ವಿದ್ಯಾರ್ಥಿಗೆ ರೂ.200 (ರೂ. ಎರಡು ನೂರು ಮಾತ್ರ)ಗಳನ್ನು ದಂಡಶುಲ್ಕ ವಿಧಿಸಿ ವಿಶ್ವವಿದ್ಯಾನಿಲಯಕ್ಕೆ ಪಾವತಿಸುವುದು.
2) 75% ಕನಿಷ್ಠ ಹಾಜರಾತಿ ಪಡೆಯಲು ಸಾಧ್ಯವಾಗುವಂತೆ ಈಗ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಶನಿವಾರ ಭಾನುವಾರಗಳಂದು ವಿಶೇಷ ತರಗತಿಗಳನ್ನು ನಡೆಸುವುದು ಹಾಗೂ ಇದಕ್ಕೆ ಪೂರಕ ದಾಖಲೆಗಳನ್ನು ವಿಶ್ವವಿದ್ಯಾನಿಲಯ ಸೂಚಿಸಿದಾಗ ನೀಡುವುದು.
3) ಪ್ರಾಯೋಗಿಕ ತರಗತಿಗಳನ್ನು ವಿಶೇಷವಾಗಿ ಭಾನುವಾರಗಳಂದು ತಪ್ಪದೇ ನಡೆಸಿ, ದಾಖಲೆಗಳನ್ನು ಸಲ್ಲಿಸುವುದು.
4) ಇಂತಹ ವಿದ್ಯಾರ್ಥಿಗಳ ಪ್ರವೇಶಾತಿ ಮಾಹಿತಿಯನ್ನು ನಿಗಧಿತ ನಮೂನೆಯಲ್ಲಿ ದಿನಾಂಕ:24.11.2021ರಂದು ಸಂಜೆ 5.30ರ ಒಳಗೆ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವುದು.

ಮೇಲ್ಕಂಡ ಎಲ್ಲಾ ನಿಬಂಧನೆಗಳನ್ನು ಪಾಲಿಸಿ ವಿದ್ಯಾರ್ಥಿಗಳಿಗೆ ಪ್ರವೇಶಾತಿಯನ್ನು ನೀಡಲು ಬಯಸುವ ಕಾಲೇಜುಗಳು ಈ ಕುರಿತು ಮುಚ್ಚಳಿಕೆ ಪತ್ರವನ್ನು ನೀಡುವ ಷರತ್ತಿಗೊಳಪಟ್ಟು ಪ್ರವೇಶಾತಿಯನ್ನು ಮಾಡಿಕೊಳ್ಳಬಹುದಾಗಿದೆ.

ಆದೇಶದ ಮೇರೆಗೆ

Mangalalakshmi M.

ಉಪಕುಲಸಚಿವರು
ಶೈಕ್ಷಣಿಕ ವಿಭಾಗ
ತುಮಕೂರು ವಿಶ್ವವಿದ್ಯಾಲಯ
ತುಮಕೂರು

ಉಪಕುಲಸಚಿವರು

ಗೆ,

ಪ್ರಾಂಶುಪಾಲರು, ಎಲ್ಲಾ ಸಂಯೋಜಿತ ಸ್ನಾತಕ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಪ್ರತಿಗಳು:

1) ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಇ-ಮೇಲ್ ಮುಖಾಂತರ ಕಳುಹಿಸುವುದು.
2) ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3) ಕಚೇರಿ ಪ್ರತಿ.